ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಹೇರೋಹಳ್ಳಿ ಉಪ-ವಿಭಾಗ, ಭಾರತ ನಗರ 1ನೇ ಹಂತ, ಬೆಂಗಳೂರು-91.

ಸಂಖ್ಯೆ:ಸ.ಕಾ.ಅ/ಹೇಉವಿ/ಪಿ.ಆರ್/ 03 /20-21 ದಿನಾಂಕ:07/11/2020

## ವಾರ್ಡ್-72ರ ವಾರ್ಡ್ ಸಮಿತಿ ಸಭೆಯ ನಡವಳಿ

ದಿನಾಂಕ: 07/11/2020 ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್ -72 ಹೇರೋಹಳ್ಳಿ ವಾರ್ಡ್‌ನ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.72 ರ ಯೋಗ ಭವನ ಕೇಂದ್ರ, ಭಾರತ್ ನಗರ 1ನೇ ಹಂತದ ಕಟ್ಟಡದಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡುವಳಿ.

### ಸಭೆಗೆ ಹಾಜರಿದ್ದವರು:

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಹುದ್ದೆ |
|---|---|---|
| 1 | ಶ್ರೀ ಪ್ರಕಾಶ್ ಎಸ್.ಆರ್ | ಕಂದಾಯ ಅಧಿಕಾರಿ |
| 2 | ಶ್ರೀಮತಿ ಶಿಲ್ಪ | ಸಹಾಯಕ ಅಭಿಯಂತರರು |
| 3 | ಶ್ರೀ ಹನುಮಂತರಾಜು | ಹಿರಿಯ ಆರೋಗ್ಯ ಪರಿವೀಕ್ಷರು ವಾರ್ಡ್-72 |
| 4 | ಶ್ರೀ ಮಾಲತೇಶ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ |
| 5 | ಶ್ರೀ ಆನಂದ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂ.ಜ,ಮಂ |
| 6 | ಶ್ರೀ ರಾಜೀವ್ ಕುಮಾರ್ | ಆರಕ್ಷಕರ ನಿರೀಕ್ಷಕರು, ಬ್ಯಾರಹಳ್ಳಿ |
| 7 | ಶ್ರೀ ಸುರೇಶ್ | ಸಹಾಯಕ ಅಭಿಯಂತರರು ಬೀದಿ ದೀಪ |
| 8 | ಶ್ರೀ ರಮೇಶ್.ಎನ್ | ಸಹ ಕಂದಾಯ ಅಧಿಕಾರಿ ಹೇರೋಹಳ್ಳಿ |
| 9 | ಅರವಿಂದ್ ಅಶೋಕ್ | ಅಧ್ಯಕ್ಷರು. ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘ |
| 10 | ಮುತ್ತಪ್ಪ | ಭಾರತನಗರ ಕ್ಷೇಮಾಭಿವೃದ್ಧಿ ಸಂಘ |
| 11 | ರಘುಶೆಟ್ಟಿ | ಸಿಂಡಿಕೇಟ್ ಕ್ಷೇಮಾಭಿವೃದ್ಧಿ ಸಂಘ |
| 12 | ಲೋಕೇಶ್ | ಸದಸ್ಯರು |
| 13 | ರಘು.ವಿ | ಸದಸ್ಯರು |
| 14 | ನಿಖಿಲ್‌ಗೌಡ | ಸದಸ್ಯರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

1) ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ: ವಾರ್ಡ್ ನಂ.72ರಲ್ಲಿ ಡಾ॥ವಿವೇಕ್ ರವರು ವಾರ್ಡ್ ನಂ.72 ರಲ್ಲಿ ಒಟ್ಟು ಪಾಸಿಟಿವ್ ಕೇಸ್ 1415 ಪ್ರಕರಣಗಳು ಕಂಡುಬಂದಿದ್ದು ಅದರಲ್ಲಿ 1262 ಕೇಸ್‌ಗಳು ಚಿಕಿತ್ಸೆ ಪಡೆದು ಬಿಡುಗಡೆ ಹೊಂದಿದ್ದು ಆಕ್ಟಿವ್ ಕೇಸ್-114 ಇರುತ್ತದೆ ಹಾಗೂ ಇಲ್ಲಿಯವರೆಗೂ 39 ಪ್ರಕರಣಗಳು ಮರಣ ಹೊಂದಿವೆ. ಎಂದು ತಿಳಿಸಿದರು. ಪ್ರತಿದಿನ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು 2 ಮೊಬೈಲ್ ಟೀಂ ಗಳಲ್ಲಿ ರೋಗಲಕ್ಷಣ ಕಂಡುಬರುವ ಜನರಿಗೆ ಮತ್ತು ಪ್ರಾಥಮಿಕ ಸಂಪರ್ಕ ಹಾಗೂ ದ್ವಿತೀಯ ಸಂಪರ್ಕ ಹೊಂದಿರುವವರಿಗೆ ಪರೀಕ್ಷೆ ಮಾಡಲಾಗುತ್ತಿದ್ದು. ರೋಗಲಕ್ಷಣವಿರುವ ರೋಗಿಗಳಿಗೆ ಆಸ್ಪತ್ರೆಯಲ್ಲಿ ರೋಗಲಕ್ಷಣವಿಲ್ಲದ ರೋಗಿಗಳಿಗೆ ಮನೆಯಲ್ಲಿ ಮತ್ತು ಕೋವಿಡ್

Scanned with CamScanner

ಕೇರ್ ಸೆಂಟರ್‌ನಲ್ಲಿ ಬಿಬಿಎಂಪಿ ವತಿಯಿಂದ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿಸಿದರು. ಹಾಗೂ ಒಂದು ವಾರದಿಂದ ರೋಗಲಕ್ಷಣಗಳು ಇದ್ದರೆ ಮಾತ್ರ ಕೋವಿಡ್-19 ಟೆಸ್ಟ್ ಮಾಡಿಸಬೇಕೆಂದು ಆದೇಶ ಆಗಿದೆ ಎಂದು ತಿಳಿಸಿದರು. ನೋಡಲ್ ಅಧಿಕಾರಿಗಳು ಮಾತನಾಡಿ ತಾತ್ಕಾಲಿಕ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಿ ಸಾರ್ವಜನಿಕರು ಹೆಚ್ಚು ಸಂಖ್ಯೆಯಲ್ಲಿ ಆಗಮಿಸುವ ಸ್ಥಳಗಳಲ್ಲಿ ಕ್ಯಾಂಪ್‌ಗಳನ್ನು ಹಮ್ಮಿಕೊಂಡು ಹೆಚ್ಚಿನ ಪರೀಕ್ಷೆ ನಡೆಸುವಂತೆ ಸೂಚಿಸಿದರು. ಹಾಗೂ ರೋಗಿಗಳಿಗೆ ಚಿಕಿತ್ಸಾಕೇಂದ್ರಗಳಲ್ಲಿ ಸರಿಯಾಗಿ ಚಿಕಿತ್ಸೆ ಊಟ ಮತ್ತು ನೀರಿನ ವ್ಯವಸ್ಥೆ ಸರಿಯಾಗಿರುವಂತೆ ಕ್ರಮ ವಹಿಸಿ ಎಂದು ತಿಳಿಸಿದರು.

- ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಜನ ಜಾಗೃತಿ ಮೂಡಿಲು ಧ್ವನಿವರ್ಧಕವಿರುವ ಆಟೋಗಳನ್ನು ಸಾಯಂಕಾಲ 5 ರಿಂದ 7 ಗಂಟೆಯವರೆಗೆ ಜನ ನಿಬಿಡ ಪ್ರದೇಶಗಳಲ್ಲಿ ಪ್ರಚಾರ ಮಾಡಲು ವ್ಯವಸ್ಥೆ ಮಾಡುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಘನತ್ಯಾಜ್ಯದ ಗುತ್ತಿಗೆದಾರರಿಗೆ ಸೂಚಿಸಿದರು. ಜೊತೆಗೆ ಬೀದಿ ಬದಿಗಳಲ್ಲಿ ತಳ್ಳುವಗಾಡಿ ಮತ್ತು ಇತರೆ ವಾಣಿಜ್ಯ ಚಟುವಟಿಕೆದಾರರಿಗೆ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡುವಂತೆ ಜಾಗೃತಿ ಮೂಡಿಸಲು ಸೂಚಿಸಿದರು.
- ಮಾಸ್ಕ್ ಧರಿಸದೆ ಸಾರ್ವಜನಿಕವಾಗಿ ಓಡಾಡುವವರಿಗೆ ಕಡ್ಡಾಯವಾಗಿ ನಿಯಮಾವಳಿಗಳನ್ವಯ ದಂಡ ವಿಧಿಸುವುದು ಮತ್ತು ಮಾಸ್ಕ್ ಧರಿಸುವಂತೆ ಹಾಗೂ ಸಾಮಾಜಿಕ ಅಂತರ ಕಾಪಾಡಿಕೊಳ್ಳುವಂತೆ ಮನವೊಲಿಸುವ ಕೆಲಸವನ್ನು ನಿರ್ವಹಿಸುವಂತೆ ಸೂಚಿಸಿದರು.

2)ಸ್ವಚ್ಛತೆ ಮತ್ತು ಘನತ್ಯಾಜ್ಯ ವಿಲೇವಾರಿ ಬಗ್ಗೆ : ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ಹಾಜರಾಗಿರುವುದಿಲ್ಲ. ಆದ್ದರಿಂದ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ವಾರ್ಡ್ ಸಂಖ್ಯೆ 72 ರಲ್ಲಿ 45 ಆಟೋಗಳಿದ್ದು 4 ಕಾಂಪ್ಯಾಕ್ಟರ್ ಗಳಿರುತ್ತವೆ. ಎಲ್ಲಾ ಆಟೋಗಳಿಗೆ ಜಿಪಿಎಸ್ ಆರ್‌ಎಫ್‌ಐಡಿ ಹಾಗೂ ಧ್ವನಿವರ್ಧಕಗಳನ್ನು ಅಳವಡಿಸಲಾಗಿರುತ್ತದೆ. ಕಸ ವಿಂಗಡಣೆ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಲಾಗಿರುತ್ತದೆ. ಕಸ ವಿಂಗಡಣೆ ಮಹತ್ವ ಮತ್ತು ಅವಶ್ಯಕತೆಯ ಬಗ್ಗೆ ತಿಳುವಳಿಕೆ ಮೂಡಿಸಲಾಗುತ್ತಿದೆ. ಬ್ಲಾಕ್ ಸ್ಪಾಟ್ ಗಳನ್ನು ಅಲಂಕಾರಗೊಳಿಸಲು ಕ್ರಮ ವಹಿಸಲಾಗುತ್ತಿದೆ. ಹಾಗೂ ಪ್ರತಿ ಮನೆ ಬಾಗಿಲುಗಳಿಗೆ ಆಟೋಗಳು ಹೋಗಿ ಹಸಿ ಕಸ ಮತ್ತು ಒಣ ಕಸವನ್ನು ವಿಂಗಡಣೆ ಮಾಡಿ ಹಾಕಿಸಿಕೊಳ್ಳಲಾಗುತ್ತಿದೆ. ಮತ್ತು ಕಸ ವಿಂಗಡಣೆ ಮತ್ತು ವಿಲೇವಾರಿಯಲ್ಲಿ ಸೆಗ್ರಿಗೇಷನ್ ಮಾಡಿ 12 ಟನ್ ಹೋಗುತ್ತಿದೆ ಎಂದು ತಿಳಿಸಿದರು. ನೋಡಲ್ ಅಧಿಕಾರಿಗಳು ಮಾತನಾಡಿ ಚಾಲಕರಿಗೆ ಮತ್ತು ಸಹಾಯಕರಿಗೆ ಸ್ಯಾನಿಟೇಜರ್, ಮಾಸ್ಕ್‌ಗಳು ಮತ್ತು ಯೂನಿಫಾರ್ಮ್ ನೀಡುವಂತೆ ಗುತ್ತಿಗೆದಾರರಿಗೆ ಹೇಳಿ ಎಂದು ತಿಳಿಸಿದರು.

3) ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗೆ ಸಂಭಂಧಿಸಿದಂತೆ: ಸ್ಯಾನಿಟರಿ ಚೇಂಬರ್‌ಗಳಿಂದ ಮೇಲೆತ್ತುವ ಹೂಳನ್ನು ಸೂಕ್ತ ರೀತಿಯಲ್ಲಿ ಸಕಾಲದಲ್ಲಿ ವಿಲೇವಾರಿ ಮಾಡುವಂತೆ ಹಾಗೂ ರಸ್ತೆಗಿಂತ ಹಾಗೂ ಎತ್ತರ ಅಥವಾ ತಗ್ಗಿನಲ್ಲಿರುವ ಸ್ಯಾನಿಟರಿ ಚೇಂಬರ್‌ಗಳಿದ್ದರೆ ಶೀಘ್ರವಾಗಿ ರಸ್ತೆ ಮಟ್ಟಕ್ಕೆ ಅಳವಡಿಸುವಂತೆ ಹಾಜರಿದ್ದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರಿಗೆ ಸೂಚಿಸಿದರು. ಹಾಗೂ ಕೆಇಬಿ ರಸ್ತೆ, ಅಂಜನಾನಗರ, ದನಿನಮಂದೆ, ಪ್ರಕೃತಿನಗರ, ರಾಘವೇಂದ್ರನಗರ, ನಿಸರ್ಗ ಲೇಔಟ್ ವಿನಾಯಕನಗರ ಪ್ರದೇಶಗಳಲ್ಲಿ ಸಮರ್ಪಕವಾಗಿ ನೀರು ಸರಬರಾಜು ಆಗುತ್ತಿದೆ ಎಂದು ತಿಳಿಸಿದರು.

4) ಅರಣ್ಯ ಇಲಾಖೆ: ಕ್ಷೇಮಾಭಿವೃದ್ಧಿ ಸಂಘದ ಮುತ್ತಪ್ಪರವರು ಸಭೆಯಲ್ಲಿ ಮಾತನಾಡಿ ಈಸ್ಟ್ ವೆಸ್ಟ್ ಕಾಲೇಜ್ ರಸ್ತೆಯಲ್ಲಿ ಮತ್ತು ಕೃಷ್ಣ ಉಪಹಾರ ಹೋಟೆಲ್ ಹತ್ತಿರ ಒಣಗಿರುವ ಮರಗಳನ್ನು ತೆರವುಗೊಳಿಸುವಂತೆ ಹೇಳಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ ಕೂಡಲೇ ಒಣಗಿದ ಮರಗಳನ್ನು ತೆರವುಗೊಳಿಸುವಂತೆ ತಿಳಿಸಿದರು.

5) ಕಾಮಗಾರಿ ಇಲಾಖೆ: ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಯಲ್ಲಿ ಗುಂಡಿಗಳಿದ್ದು ಇವುಗಳನ್ನು ತುರ್ತಾಗಿ ಮುಚ್ಚಲು ಸಂಬಂಧಿಸಿದ ವಾರ್ಡ್ ಇಂಜಿನಿಯರ್‌ಗೆ ಸೂಚಿಸಲಾಯಿತು. ಮಳೆ ನಿಂತ ಕೂಡಲೇ ಡಾಂಬರು ಮಿಕ್ಸ್‌ನಿಂದ ಮುಚ್ಚುವುದಾಗಿ ಸಹಾಯಕ ಇಂಜಿನಿಯರ್ ರವರು ಸಭೆಗೆ ತಿಳಿಸಿದರು. ಕರ್ನಾಟಕ ಬ್ಯಾಂಕ್ ರಸ್ತೆಯಲ್ಲಿ ಸ್ಯಾನಿಟರಿ ಲೈನ್ ಒಡೆದು ರಸ್ತೆಗೆ ಬಿಟ್ಟಿರುವುದರಿಂದ ಕೂಡಲೇ ಕ್ರಮವಹಿಸುವಂತೆ ಸಹಾಯಕ ಅಭಿಯಂತರರಿಗೆ ಸೂಚಿಸಲಾಗಿದೆ.

Scanned with CamScanner

- ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ ದೂರುಗಳನ್ನು ದಾಖಲಿಸಲು ವಾರ್ಡ್‌ನಲ್ಲಿ ದೂರು ದಾಖಲಿಸುವಂತೆ ಪುಸ್ತಕ ತೆರೆದು ದಾಖಲಾಗುವ ದೂರುಗಳನ್ನು ಆದ್ಯತೆಯ ಮೇಲೆ ಕ್ರಮ ವಹಿಸುವಂತೆ ಸೂಚಿಸಿದರು.
- ಸದರಿ ವಾರ್ಡಿನ ಮುಖ್ಯ ರಸ್ತೆಗಳನ್ನು ತುರ್ತಾಗಿ ಸಾರ್ವಜನಿಕರು ಸುಗಮವಾಗಿ ಸಂಚಾರಿಸುವಂತೆ ಕ್ರಮ ವಹಿಸಲು ವಾರ್ಡಿನ ಎಲ್ಲಾ ಅನುದಾನಗಳನ್ನು ಉಪಯೋಗಿಸಿಕೊಂಡು ಕ್ರಮ ಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

<u>6. ) ಕಂದಾಯ ಇಲಾಖೆ:</u> ವಾರ್ಡ್ ನಂ.72 ಹೇರೋಹಳ್ಳಿಗೆ ಸಂಬಂಧಪಟ್ಟಂತೆ ಕಂದಾಯ ಇಲಾಖೆಯಲ್ಲಿನ ಟಾಪ್ ಡಿ ಪಾಲ್ಟರ್ಸ್ ಮಾಲೀಕರುಗಳಿಗೆ ಡಿಮ್ಯಾಂಡ್ ನೋಟೀಸ್ ಜಾರಿ ಮಾಡಿ ಅದರಲ್ಲಿ ಟಾಪ್ 100 ಆಸ್ತಿ ಮಾಲೀಕರುಗಳನ್ನು ಗುರುತಿಸಿ ಸದರಿ ಮಾಲೀಕರುಗಳು ತೆರಿಗೆ ಪಾವತಿಸಿದೆ ಇದ್ದಲ್ಲಿ ಜಪ್ತಿ ವಾರೆಂಟ್ ಜಾರಿ ಮಾಡಿ ಕಂದಾಯ ವಸೂಲಾತಿಗೆ ಅಗತ್ಯ ಕ್ರಮ ವಹಿಸುವಂತೆ ಸಹ ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳ ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಹಾಗೂ ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಹಾಗೂ ಸದರಿ ಸಭೆಯಲ್ಲಿ ಅರ್ಟಿಕಲ್ಚರ್ ಮತ್ತು ಪಶುಸಂಗೋಪನಾ ಇಲಾಖೆ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳನ್ನು ತಪ್ಪದೆ ಮುಂದಿನ ಸಭೆಗೆ ಆಹ್ವಾನಿಸಲು ತಿಳಿಸಲಾಯಿತು.

<u>ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.</u>

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂರರು
ವಾರ್ಡ್ ನಂ.72 ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ.72 ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner